# ನೀವು ಕೇಳಿದಿರಿ?

ಮುರಲೀಧರ ಕುಲಕರ್ಣಿ, ಬೀದರ್

ಗಣಪತಿಯ ಭಾರವನ್ನು ಇಲಿ ಹೊರಬಲ್ಲುದೆ?



ಇಡೀ ಗಣಕದ ಚಲನೆ ಒಂದು ಸಣ್ಣ ಮೌಸ್ ಮೇಲೆ! ಗಣಪನ ಇಲಿ ಇಂಥದೇ ಒಂದು ಸ್ಪೆಷಲ್ ಮೌಸ್.

ಹರಿತಸ, ಬೆಂಗಳೂರು

ಹಾಸ್ಯ ಎಂದು ಹೊರಹೊಮ್ಮಿತು?

ಶಿವ 'ಕಾಮ ದಹನ ಮಾಡುತ್ತೇನೆ' ಎಂದಾಗ. ಅದೇ ಪ್ರಪಂಚದ ಮೊಟ್ಟಮೊದಲ ಜೋಕ್.

ರಮೇಶ ಜ. ಬೊಂಗಾಳೆ, ಬೈಲಹೊಂಗಲ

ದೇವಾಲಯಕ್ಕೂ ನ್ಯಾಯಾಲಯಕ್ಕೂ ವ್ಯತ್ಯಾಸವೇನು?

ಅಲ್ಲಿ 'ಶುಕ್ಲಾಂಬರಧರಂ'; ಇಲ್ಲಿ 'ಶುಲ್ಕಾಂಬರ ಭರಂ'.

ವಿ. ಹೇಮಂತಕುಮಾರ, ಬೆಂಗಳೂರು

ಹೃದಯದ ಭಾರ ನೀಗಿಸುವೆ ಬಾರ ಎಂದು ಸಂದೇಶ ಕಳಿಸಿದ್ದಾಳಲ್ಲಾ....?



ತಿಳಿಯಿತು. ಅವಳು ಥಂಡಿ ನೀಗಿಸುವ ನೀಲಗಿರಿ ತೈಲದ ಸೇಲ್ಸ್‌ಗರ್ಲ್.

ಆರತಿ ಘಟಿಕಾರ್, ದುಬೈ

ಕೆಲವು ಸ್ವಾಮೀಜಿಗಳು ತಮ್ಮ ಹೆಸರಿನ ಹಿಂದೆ ಶ್ರೀ ಎಂದು ಮೂರು ಬಾರಿ ಸೇರಿಸಿಕೊಳ್ಳುವುದು ಏಕೆ?

ಸ್ವಂತಕ್ಕೊಂದು, ಸ್ವಜನಕ್ಕೊಂದು, ಮಠಕ್ಕೊಂದು. ಶ್ರೀ ಉರುಫ್ ಸಿರಿ ಸೇರಲೆಂಬ ಸೂಚನೆಯಿರಬಹುದು.

ಪಿ.ಜೆ. ರಾಘವೇಂದ್ರ, ಮೈಸೂರು

ಸಾಂದರ್ಭಿಕ ಶಿಶುವಿನ ಪೋಷಕರನ್ನು ಸಾಂದರ್ಭಿಕ ಶಿಶುಪಾಲ ಎನ್ನಬಹುದೆ?

ಅನ್ನಬಹುದು; ಆದರೆ ತಪ್ಪು ನೂರಾದರೂ ತಲೆ ಹಾರಿಸಲಾಗದು. ತಲೆಯೇ ಇರದ ಕಬಂಧರವರು.

ದೀಪಾ ವಿ. ಮಹಾಲೆ, ಸಾಂಬ್ರಾಣಿ

ಕ್ಷೀರಪಾನಕ್ಕೂ, ಮದ್ಯಪಾನಕ್ಕೂ ಏನು ವ್ಯತ್ಯಾಸ?

ಹೆಚ್ಚಾದರೆ, ಒಂದು ಬೊಜ್ಜಿಗೆ ದಾರಿ, ಇನ್ನೊಂದು ಬೊಜ್ಜಕ್ಕೆ.

ಕೃಷ್ಣಮೂರ್ತಿ ಎಸ್. ಬೆಂಗಳೂರು

ನನ್ನ ಭಾವಚಿತ್ರ ಕಂಡ ಯಾವ ಹೆಣ್ಣೂ ನನ್ನನ್ನು ವರಿಸಲು ಒಪ್ಪುತ್ತಿಲ್ಲ. ನಾನು ಮೀಸೆ ಬಿಡದಿರುವುದೇ ಇದಕ್ಕೆ ಕಾರಣವೆ?

ಮ್ಯಾನುಫ್ಯಾಕ್ಚರಿಂಗ್ ಡಿಫೆಕ್ಟ್‌ಗೆ ಧರಿಸಬೇಕಾದ್ದು ಮೀಸೆಯಲ್ಲ, ಮುಖವಾಡ ಎಂದಳೊಬ್ಬ ಲಲನೆ.

ಎಂ.ಜಿ. ನೇಹವರ್ಷಿಣಿ, ಬಳ್ಳಾರಿ

ಗಡ್ಡ ಬಿಟ್ಟರೆ ಸನ್ಯಾಸಿ; ಜಡೆ ಬಿಟ್ಟರೆ ಯೋಗಿ. ಎರಡೂ ಬಿಟ್ಟರೆ?

ಗಡ್ಡ/ಜಡೆಯ ಭಾರಕ್ಕೆ ತಲೆ ಹಿಂದಕ್ಕೆ/ಮುಂದಕ್ಕೆ ವಾಲದಂತೆ ಸಮತೋಲನ ಕಾಪಾಡಿಕೊಳ್ಳುವ ಜಾಣ.

ಕುಮಾರ ಚಲವಾದಿ, ಹಾಸನ

ಹೆಣ್ಣು ಮನೆಯ ಕಣ್ಣು ಅನ್ನುತ್ತಾರೆ. ಮದುವೆಯಾಗಿ ಗಂಡನ ಮನೆಗೆ ಹೋಗುತ್ತಾಳಲ್ಲ, ಆಗ?

ಅತ್ತಿಂದಿತ್ತ, ಇತ್ತಿಂದತ್ತ ಚಲಿಸುವ ಕಣ್ಣುಪಾಪ(ಪೆ).

ಮಲ್ಲಿಕಾರ್ಜುನ ಹ. ಬಗಲಿ, ಜತ್ತ

ಸಾಮಾನ್ಯ ನೊಣ ಹಾಗೂ ಜೇನುನೊಣಗಳಲ್ಲಿರುವ ವ್ಯತ್ಯಾಸವೇನು?

ಮಾವಿನಹಣ್ಣಿನ ನೆನಪಿನೊಡನೆ ನೊಣ ನೆನಪಾಗುತ್ತದೆ. ಮಾವನ ಹೆಣ್ಣಿನ ನೆನಪಿನೊಡನೆ ಜೇನು ನೆನಪಾಗುತ್ತದೆ.

ವಿ.ಎಸ್. ಹಿಂದೂಪುರ, ಬಳ್ಳಾರಿ

ಲವ್ ಮ್ಯಾರೇಜ್‌ಗೂ ಅರೇಂಜ್ಡ್ ಮ್ಯಾರೇಜ್‌ಗೂ ಎಷ್ಟು ವ್ಯತ್ಯಾಸ?

ಹಲವಾರು ಲಕ್ಷಗಳು.

## ಬಹುಮಾನಿತ ಪ್ರಶ್ನೆ

ಆರ್. ಮಧುಸೂದನ್, ಹಾಸನ

ತಿಥಿ ಮಾಡಿಸಿಕೊಳ್ಳದೆ ಸದ್ಗತಿ ಪಡೆಯಬೇಕೆಂಬ ಆಸೆ. ಸುಲಭದ ದಾರಿ ತಿಳಿಸುವಿರಾ?

ದೇಹದಾನ ಮಾಡಿ. ಕನಿಷ್ಠ ನಾಲ್ಕು ಜನರ ಹಾರೈಕೆಯಿಂದ ಸದ್ಗತಿ ಖಚಿತ.

ಫಾಲನೇತ್ರ ಸಜ್ಜನ, ಶಿರಸಿ

ಮೂಕನನ್ನು ವಾಚಾಳಿಯಾಗಿಸಲು ಅವನ ಗುಣಗಳನ್ನು ಹೊಗಳಿಕೊಳ್ಳಲು ಬಿಟ್ಟರಾಯ್ತಲ್ಲವೆ?

ನ್ಯೂ ಐಡಿಯ! ಟೀವಿ ಪ್ರೋಗ್ರಾಂ ಆಂಕರ್ ಮಾಡಿಬಿಡಿ. ವಾಹಿನಿಯೇ ಮುಚ್ಚಿದರೂ ಇವನ ಬಾಯಿ ಮುಚ್ಚಲ್ಲ.

ಎಂ.ವಿ. ವೆಂಕಮ್ಮ, ಬಳ್ಳಾರಿ

ಮುಖ್ಯಮಂತ್ರಿ ಆಗುವುದಕ್ಕೂ ಬಿಗ್‌ಬಾಸ್‌ನಲ್ಲಿ ಗೆಲ್ಲುವುದಕ್ಕೂ ಏನು ವ್ಯತ್ಯಾಸ?

ನೋಟಾಟಕೆಯಿಂದ ಮುಖ್ಯಮಂತ್ರಿ; ಬೂಟಾಟಿಕೆಯಿಂದ ಬಿಗ್‌ಬಾಸ್.

ದಿನೇಶ್, ಗುಡ್ಡದೂರು

ಸಿನಿಮಾ ಚಿತ್ರೀಕರಣ ಮುಗಿದ ಮೇಲೆ ಕುಂಬಳಕಾಯಿ ಒಡೆಯುವುದೇಕೆ ರಾಮ್?



ಡೈಲಾಗ್ಸೇಳಲು ಸೈಕಲ್ಹೊಡೆದು ಸಮಯ ತಿಂದವರ ತಲೆಯನ್ನೇ ಒಡೆಯಬೇಕೆನಿಸಿರುತ್ತದೆ. ಆಗದುದರಿಂದ..

ಅಮರಯ್ಯಾ ಪತ್ರಿಮಠ, ಸುರಪೂರ

ಗ್ರಹಕ್ಕೂ ಗ್ರಹಚಾರಕ್ಕೂ ಎಂಥಾ ನಂಟು?

ನೋಡುಗರದೇ ನಂಟು; ಖಗೋಳವಿಜ್ಞಾನಿ ನೋಡಿದರೆ ಗ್ರಹ; ಜ್ಯೋತಿಷಿ ನೋಡಿದರೆ ಗ್ರಹಚಾರ.

ಕೊಟ್ಟೂರು ಜವಳಿ ಜಯ್ಯಣ್ಣ, ದಾವಣಗೆರೆ

ಮಂಗಳಾರತಿ ತೊಗೊಂಡ್ರೆ ಉಷ್ಣ; ತೀರ್ಥ ತೊಗೊಂಡ್ರೆ ಶೀತ; ಪ್ರಸಾದ ತಿಂದರೆ?

ಹತ್ತಿರದ ವೈದ್ಯರಿಗೆ ಶುಕ್ರದೆಸೆ.

■ ರಾಮ್